# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:16/02/2017 ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರ ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಸೀಮಾ ಅಲ್ತಾಫ್ ಖಾನ್ | ಅಧ್ಯಕ್ಷರು | ವಿಶೇಷ ಅಧಿಕಾರಿ |
| 02 | ಜಿ.ಕೆ. ವೆಂಕಟೇಶ್ | ಸದಸ್ಯರು | ಕಾನೂನು ಅಧಿಕಾರಿಗಳು |
| 03 | ಆರ್. ಸಂಪತ್‌ರಾಜ್ | ಸದಸ್ಯರು | ಸಹಾಯಕ ಆಯುಕ್ತರು (ಆಸ್ತಿಗಳು ಕೆಂದ್ರ ಕಛೇರಿ) |
| 04 | ಬಿ.ಎನ್. ಜಯಪ್ರಕಾಶ್ | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ (ಬಿ.ಟಿ.ಎಂ.ಲೇಔಟ್) |
| 05 | ಅಬ್ದುಲ್ ವಾಜಿದ್ | ಸದಸ್ಯರು | ಸ.ಕಂ.ಅ(ಹೆಬ್ಬಾಳ ಉಪವಿಭಾಗ) |
| 06 | ಅಬ್ದುಲ್ ರಖೀಬ್ ಝಾಖೀರ್ | ಸದಸ್ಯರು | |
| 07 | ಶಿವಪ್ರಕಾಶ್ | ಸದಸ್ಯರು | |
| 08 | ಹೆಚ್.ಎ. ಕೆಂಪೇಗೌಡ | ಸದಸ್ಯರು | |
| 09 | ಮಧುಕುಮಾರಿ ವಾಗೀಶ್ | ಸದಸ್ಯರು | |
| 10 | ಎಂ.ಬಿ. ದ್ವಾರಕಾನಾಥ್ | ಸದಸ್ಯರು | |
| 11 | ಎಸ್. ಲೀಲಾ ಶಿವಕುಮಾರ್ | ಸದಸ್ಯರು | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**1)ವಿ.ಸಂ/ಆಸ್ಥಾಸ/14 (ಕಂ)/15-16.**

ಶ್ರೀ ಮಹದೇವ ನಂ.44, ಎನ್.ಪಿ. ಲೇಔಟ್ ರವರು ಹೊಸಕೆರೆ ರಸ್ತೆ, ಬಿನ್ನಿಮಿಲ್ ಮುಂಭಾಗ, ಮಾಗಡಿ ರಸ್ತೆ, ವಾರ್ಡ್ ನಂ.120 ಕಾಟನ್‌ಪೇಟೆ ವ್ಯಾಪ್ತಿಯ ರೈಲ್ವೇ ಹಳಿಯ ಪಕ್ಕದಲ್ಲಿರುವ 15 X 15 ಅಡಿ ಅಳತೆಯ ಪಾಲಿಕೆಯ ಸ್ವತ್ತನ್ನು ಗುತ್ತಿಗೆಗೆ ಪಡೆದಿದ್ದು, ಮಾಸಿಕ ಗುತ್ತಿಗೆ ದರ ರೂ.5,625/- ಗಳಿಗೆ ಹೆಚ್ಚಿಸಿ ಸ.ಕಂ.ಅ.(ಚಿಕ್ಕಪೇಟೆ) ರವರು ದಿನಾಂಕ:19/02/2016 ರಂದು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

***ಪ್ರಸ್ತಾವನೆ:-*** ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಗೈರುಹಾಜರಾಗಿದ್ದು, ಪ್ರತಿವಾದಿಗಳು ಹಾಜರಾಗಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟ ಮೂಲ ಕಡತ ಮತ್ತು ಟಿಪ್ಪಣಿ ಇಲ್ಲದ ಕಾರಣ, ಪ್ರಕರಣವನ್ನು ಮುಂದೂಡಲಾಯಿತು.

**2)ವಿಷಯ ಸಂಖ್ಯೆ:ಅಸ್ಥಾಸ/11/(ಕಂದಾಯ)/2016-17.**

ಮೆ॥ ಬೃಂದಾವನ ಎಂಟರ್‌ಪ್ರೈಸಸ್ ರವರು ಸ್ವತ್ತಿನ ಸಂಖ್ಯೆ:340/83, 12ನೇ ಮುಖ್ಯರಸ್ತೆ, ರಾಜಾಜಿನಗರ, 6ನೇ ಬ್ಲಾಕ್, ಬೆಂಗಳೂರು. ಈ ಸ್ವತ್ತಿನ ಕಂದಾಯ ಪರಿಷ್ಕರಣೆಗೆ ಸಂಬಂಧಿಸಿದಂತೆ ನ್ಯಾಯಾಲಯದ ಮೊರೆ ಹೋಗಿದ್ದು, ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ, ಮಹಾನಗರ ಪಾಲಿಕೆಯ ವಿರುದ್ಧ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

***ಪ್ರಸ್ತಾವನೆ:-*** ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಗೈರುಹಾಜರಾಗಿದ್ದು, ಪ್ರತಿವಾದಿಗಳು ಹಾಜರಾಗಿರುತ್ತಾರೆ. ವರದಿ ನೀಡಲು ಸಹ ಕಂದಾಯ ಅಧಿಕಾರಿ (ಗೋವಿಂದರಾಜನಗರ) ರವರಿಗೆ ಸೂಚಿಸಿ, ಪ್ರಕರಣವನ್ನು ಮುಂದೂಡಲಾಯಿತು.

**3)ವಿ.ಸಂ/ಅಸ್ಥಾಸ/12/(ಜಾಹೀರಾತು)/16-17.**

ಮೆ॥ ಅಲೇಶ್ ಕಲೆಕ್ಷನ್ಸ್ ಸಂಸ್ಥೆಯವರು, ಜಾಹೀರಾತು ವಿಷಯವಾಗಿ ಪಾಲಿಕೆಯ ವತಿಯಿಂದ ತಮ್ಮ ಸಂಸ್ಥೆಗೆ ಆರ್ಥಿಕ ನಷ್ಟ ಉಂಟಾಗಿದೆ ಎಂದು ಪಾಲಿಕೆಯ ವಿರುದ್ಧ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

***ಪ್ರಸ್ತಾವನೆ:-*** ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿದ್ದರು. ಮತ್ತು ಪ್ರತಿವಾದಿಗಳಾಗಿ ಸಹಾಯಕ ಆಯುಕ್ತರು (ಜಾಹೀರಾತು-ಕೇಂದ್ರ) ರವರು ಹಾಜರಿದ್ದರು. ಮೇಲ್ಮನವಿದಾರರು ತಮ್ಮ ವಾದ ಮಂಡಿಸಲು ಲಿಖಿತ ಹೇಳಿಕೆಗಳನ್ನು ಸಲ್ಲಿಸಿದರು. ಪ್ರತಿವಾದಿಗಳು ತಮ್ಮ ವಾದವನ್ನು ಮಂಡಿಸುತ್ತಾ, ಸದರಿ ಸಂಸ್ಥೆಯವರು ಜಾಹೀರಾತು ನಿಬಂಧನೆ ಮತ್ತು ಷರತ್ತುಗಳನ್ನು ಉಲ್ಲಂಘಿಸಿದ್ದಾರೆ ಎಂದು ತಿಳಿಸಿದರು. 2012 ರಲ್ಲಿ ಅನುಮತಿ ಮುಗಿದ ನಂತರವೂ 2013 ಮತ್ತು 2014 ರಲ್ಲೂ ಅನಧಿಕೃತವಾಗಿ ಮುಂದುವರೆಸಿರುತ್ತಾರೆ ಮತ್ತು ಅನುಮತಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಜಾಹೀರಾತನ್ನು ಅಳವಡಿಸಿದ್ದಾರೆ ಎಂದು ತಿಳಿಸಿದರು. ಮೇಲ್ಮನವಿದಾರರು ತಮ್ಮ ವಾದ ಮಂಡಿಸುತ್ತಾ, 500 ಸಂಖ್ಯೆಯ ಜಾಹೀರಾತುಗಳಿಗೆ ಅನುಮತಿ ನೀಡಿರುವುದು ನಿಜ, ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಹಾಕಿಕೊಂಡಿಲ್ಲ. ನಾವು ಕೇವಲ 168 ಸಂಖ್ಯೆಯಲ್ಲಿ ಮಾತ್ರ ಅಳವಡಿಸಿಕೊಂಡಿರುತ್ತೇವೆ. ಇದರ ಬಗ್ಗೆ ಮಾನ್ಯ ಆಯುಕ್ತರಿಗೆ ಹಾಗೂ ಸಂಬಂಧಪಟ್ಟ ಪಾಲಿಕೆಯ ವಿವಿಧ ಕಛೇರಿಗಳಿಗೆ ಸುಮಾರು ಎಂಟು ಬಾರಿ ಮನವಿ ಪತ್ರವನ್ನು ನೀಡಿರುತ್ತೇನೆ ಎಂದು ತಿಳಿಸಿದರು. ಸಹಾಯಕ ಆಯುಕ್ತರು (ಜಾಹೀರಾತು) ರವರು ವಾದ ಮಂಡಿಸುತ್ತಾ ನ್ಯಾಯಾಲಯದ ತಡೆಯಾಜ್ಞೆ ಇರುವುದಾಗಿ ತಿಳಿಸಿ, ಸದರಿ ಸಂಸ್ಥೆಯವರು ಅನಧಿಕೃತವಾಗಿ ಮುಂದುವರೆಸಿದ್ದಾರೆ. ಇದರಿಂದ ಜಾಹೀರಾತು ತೆರಿಗೆ ಮತ್ತು ದಂಡ ಸೇರಿ ರೂ.7.60 ಕೋಟಿಗಳನ್ನು ವಿಧಿಸಲಾಗಿದೆ ಎಂದು ತಿಳಿಸಿದರು. ನ್ಯಾಯಾಲಯದ ತಡೆಯಾಜ್ಞೆ ಪ್ರತಿಯನ್ನು ಪರಿಶೀಲಿಸಲು ಸಹಾಯಕ ಆಯುಕ್ತರು (ಜಾ) ರವರಿಗೆ ತಿಳಿಸಲಾಯಿತು. ನ್ಯಾಯಾಲಯದ ಆದೇಶದಲ್ಲಿ (ಒ.ಎಸ್. ನಂ.25402/2014) ತಡೆಯಾಜ್ಞೆ ಇರುವುದಿಲ್ಲವೆಂಬ ಮಾಹಿತಿಯನ್ನು ನೀಡಿದರು. ಆ ಸಂದರ್ಭದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿಗಳು ತೆಗೆದುಕೊಂಡ ಕ್ರಮಗಳ ಬಗ್ಗೆ ಪರಿಶೀಲಿಸಲಾಯಿತು. ದಿನಾಂಕ:25-06-2012 ರಲ್ಲಿ ಪಾಲಿಕೆ ನಿರ್ಣಯ ಆದನಂತರ ದಿನಾಂಕ:06-03-2013 ರಲ್ಲಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಮೇಲ್ಮನವಿದಾರರು 500 ಜಾಹೀರಾತುಗಳ ಬದಲಿಗೆ 150 ಜಾಹೀರಾತು ಅಳವಡಿಸಿಕೊಳ್ಳಲು ಅನುಮತಿ ನೀಡಲು ಹಾಗೂ ಈ ಹಿಂದೆ ಅಳವಡಿಸಿದ್ದ 168ಕ್ಕೆ ನೆಲಬಾಡಿಗೆ ಮತ್ತು ಜಾಹೀರಾತು ತೆರಿಗೆಯನ್ನು 3 ವರ್ಷಕ್ಕೆ ಪಾವತಿಮಾಡುವುದಾಗಿ ಕೋರಿಕೆ ಸಲ್ಲಿಸಿದರು. ಸ್ಥಳ ಪರಿಶೀಲನಾ ವರದಿಯಲ್ಲಿ 750 ಜಾಹೀರಾತುಗಳಿವೆ ಎಂದು ಸಹಾಯಕ ಆಯುಕ್ತರು (ಜಾ) ರವರು ತಿಳಿಸಿದರು.

-ಒಟ್ಟು 168 ಜಾಹೀರಾತುಗಳಿಗೆ ನೆಲಬಾಡಿಗೆ ಮತ್ತು ಜಾಹೀರಾತು ತೆರಿಗೆಯನ್ನು ಪಾವತಿ ಮಾಡಲು ಸಿದ್ಧರಿರುವುದಾಗಿ ಮೇಲ್ಮನವಿದಾರರು ಕೋರಿದರು. ಸಹಾಯಕ ಆಯುಕ್ತರು (ಜಾ) ರವರು 500 ಜಾಹೀರಾತುಗಳ ಬದಲಿಗೆ 750 ಜಾಹೀರಾತುಗಳನ್ನು ಅಳವಡಿಸಲಾಗಿದೆ ಎಂದು ಈ ಹಿಂದೆಯೇ ವರದಿ ಮಾಡಲಾಗಿದೆ ಎಂದು ಸಮಿತಿಯ ಗಮನಕ್ಕೆ ತಂದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ಸ್ಥಳಗಳಲ್ಲಿ 2.5 X 4 ಅಡಿ ಅಳತೆಯ 500 ಹೂಕುಂಡಗಳನ್ನು ಅಳವಡಿಸಿ, ಅವುಗಳ ಮೇಲೆ ನಕ್ಷೆಯ ಪ್ರಕಾರ ವಾಣಿಜ್ಯ ಜಾಹೀರಾತು ಮತ್ತು ಪಾಲಿಕೆ ಸಂದೇಶವನ್ನು ಬಿ.ಓ.ಟಿ. ಆಧಾರದ ಮೇಲೆ ಅಳವಡಿಸುವ ಬಗ್ಗೆ ಮೂರು ವರ್ಷಗಳ ಕಾಲಕ್ಕೆ ದಿನಾಂಕ:25-06-2009 ರಂದು ಪಾಲಿಕೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಂಟಿ ಆಯುಕ್ತರು (ಜಾಹೀರಾತು) ರವರು ದಿನಾಂಕ:12-03-2009 ರಂದು ನಗರದ ಪ್ರಮುಖ ರಸ್ತೆಗಳಲ್ಲಿ ಬರುವ 500 ವಿದುತ್ ಕಂಬಗಳ ಮೇಲೆ ಅಲಂಕಾರಿಕ ಹೂಕುಂಡಗಳನ್ನು ಅಳವಡಿಸಿ, ಹೂಕುಂಡಗಳ ಮೇಲೆ ಪಾಲಿಕೆಯ ಸಂದೇಶ ಮತ್ತು ಜಾಹೀರಾತುಗಳನ್ನು ಮಾಡಲು ದಿನಾಂಕ:25-06-2008ರಂದು ಮಾಡಿಕೊಂಡಿರುವ ಕರಾರು ಪತ್ರದಲ್ಲಿ ವಿಧಿಸಿರುವ ಷರತ್ತುಗಳಂತೆ ಸದರಿ ಹೂಕುಂಡಗಳನ್ನು ಅಳವಡಿಸಲು ಅನುಮತಿ ನೀಡಿರುತ್ತಾರೆ.

ತದನಂತರ, ಹೂಕುಂಡಗಳಿಗೆ ನೀರು ಸಿಂಪಡಿಸಿದ ನಂತರ ವಿದ್ಯುತ್ ಷಾರ್ಟ್ ಸರ್ಕ್ಯೂಟ್ ಆಗಿ, ಬಿ.ಬಿ.ಎಂ.ಪಿ. (ವಿದ್ಯುತ್ ವಿಭಾಗ) ರವರು ಸದರಿ ಹೂಕುಂಡಗಳನ್ನು ತೆರವುಗೊಳಿಸಿರುತ್ತಾರೆ. ಈ ಸಂಬಂಧ ಮೆ॥ ಅಲೇಶ್ ಕಲೆಕ್ಷನ್ಸ್ ಸಂಸ್ಥೆಯವರು ದಿನಾಂಕ:19-06-2012 ರಂದು ಪೂಜ್ಯ ಮಹಾಪೌರರಿಗೆ ಮನವಿಪತ್ರವನ್ನು ನೀಡಿರುತ್ತಾರೆ. ಈ ಬಗ್ಗೆ ಬೃ.ಬೆಂ.ಮ.ಪಾಲಿಕೆಯು ದಿನಾಂಕ:30-07-2012 ರಂದು ಕೌನ್ಸಿಲ್ ಸಭೆಯಲ್ಲಿ "ದಿನಾಂಕ: 25-06-2012 ರ ಆಯುಕ್ತರ ಟಿಪ್ಪಣಿಯನ್ನು ಭಾಗಶಃ ಒಪ್ಪುತ್ತಾ. ಸದರಿ ಸಂಸ್ಥೆಯವರು ಉಲ್ಲಂಘಿಸಿರುವ ಷರತ್ತುಗಳನ್ನು ಸರಿಪಡಿಸಿಕೊಳ್ಳುವ ನಿಭಂಧನೆಯೊಂದಿಗೆ ಸದರಿಯವರು ಕೇಳಿರುವ ವಿನ್ಯಾಸದ (20x10 ಅಡಿ ಅಳತೆಯ ಕ್ಯಾಂಟಿ ಲಿವರ್ ಮಾದರಿಯ) ಜಾಹೀರಾತುಗಳನ್ನು ಅಳವಡಿಸಿಕೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು" ಎಂದು ನಿರ್ಣಯ ಕೈಗೊಂಡಿರುತ್ತಾರೆ.

ಆದರೆ ಕೆ.ಎಂ.ಸಿ. ಕಾಯ್ದೆ 1976ರ ಸೆಕ್ಷನ್ 72 ರ ಪ್ರಕಾರ ಕೌನ್ಸಿಲ್ ಸಭೆಯ ನಿರ್ಣಯಕ್ಕೆ ಮಾನ್ಯ ಆಯುಕ್ತರು 15 ದಿನಗಳ ಒಳಗಾಗಿ ಚಾಲನೆ ನೀಡಬೇಕಾಗಿತ್ತು. ಆದರೆ ಆಯುಕ್ತರ ಕಛೇರಿಯಿಂದ ಯಾವುದೇ ಅನುಮತಿ ಪತ್ರವಾಗಲೀ ಬಂದಿರುವುದಿಲ್ಲ.

ಬೃ.ಬೆಂ.ಮ.ಪಾಲಿಕೆಯಿಂದ ಯಾವುದೇ ಅನುಮತಿ ನೀಡದ ಹಿನ್ನೆಲೆಯಲ್ಲಿ ಸದರಿ ಸಂಸ್ಥೆಯವರು ಮಾನ್ಯ ನ್ಯಾಯಾಲಯದಲ್ಲಿ ಓ.ಎಸ್/25697/2013 ರಂತೆ ದಾವೆ ಹೂಡಿರುತ್ತಾರೆ. ಈ ಸಂಬಂಧ ಮಾನ್ಯ ನ್ಯಾಯಾಲಯವು ದಿನಾಂಕ: 27/04/2013 ರಂದು ನಗರದ ವಿವಿಧೆಡೆ ಅಳವಡಿಸಿರುವ ಹೂಕುಂಡಗಳ ಜಾಹೀರಾತುಗಳನ್ನು ತೆರವುಗೊಳಿಸದಂತೆ ಹಾಗೂ ಯಥಾಸ್ಥಿತಿ ಕಾಪಾಡುವಂತೆ ತಡೆಯಾಜ್ಞೆ ನೀಡಿರುತ್ತದೆ.

ಆದಾಗ್ಯೂ ಸಹ ಪಾಲಿಕೆಯ ಅಧಿಕಾರಿಗಳು ದಿನಾಂಕ:02-05-2013 ರಂದು ನ್ಯಾಯಾಲಯದ ತಡೆಯಾಜ್ಞೆ ಆದೇಶವಿದ್ದರೂ ಸಹ ಹೂಕುಂಡಗಳನ್ನು ತೆರವುಗೊಳಿಸಿರುತ್ತಾರೆ. ಹಾಗೂ ಆಯುಕ್ತರ ನಕಲಿ ಸಹಿ ಬಳಸಿರುವುದಾಗಿ ಆಕ್ಷೇಪಿಸಿ, ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಕೇಸ್ ದಾಖಲಿಸಿರುತ್ತಾರೆ. ಈ ಸಂಬಂಧ ನ್ಯಾಯಾಲಯವು ದಿನಾಂಕ:08-04-2016 ರಂದು ಬಿ ರಿಪೋರ್ಟ್ ನೀಡಿರುತ್ತದೆ. ಮುಂದುವರೆದು ದಿನಾಂಕ: 27-11-2013 ರಂದು ಮಾನ್ಯ ಆಯುಕ್ತರು 5 x 8 ಅಳತೆಯ 500 ಸಂಖ್ಯೆಯ ಕಿಯಾಸ್ಕ್‌ಗೆ ಸಂಬಂಧಿಸಿದಂತೆ ಹಳೆಯ ಬಾಕಿ ರೂ.1,90,47,290/- ಗಳನ್ನು ಪಾವತಿಸಲು ಡಿಮ್ಯಾಂಡ್ ನೀಡಿರುತ್ತಾರೆ.

ಅದರಂತೆ ದಿನಾಂಕ:19-12-2013 ರಂದು ಮೆ॥ ಅಲೇಶ್ ಕಲೆಕ್ಷನ್ಸ್ ಸಂಸ್ಥೆಯವರು ರೂ.64,30,000/- ಗಳನ್ನು ಡಿ.ಡಿ. ಮುಖಾಂತರ ಪಾವತಿಸಿರುತ್ತಾರೆ. ಏತನ್ಮಧ್ಯೆ 5 x 8 ಅಳತೆಯ 168 ಕಿಯಾಸ್ಕ್‌ಗಳನ್ನು

ಅಳವಡಿಸಲಾಗಿತ್ತು. ಆದರೆ ಮಾನ್ಯ ಆಯುಕ್ತರು ದಿನಾಂಕ:24-02-2014 ರಂದು ಈ ಹಿಂದೆ ನೀಡಿದ್ದ ಆದೇಶವನ್ನು ರದ್ದುಗೊಳಿಸಿರುತ್ತಾರೆ. ಮೇಲ್ಕಂಡ ಆದೇಶವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿ, ದಿನಾಂಕ:06-03-2014ರಂದು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತಾರೆ.

ಈ ಸಂಬಂಧ ಮೆ॥ ಅಲೇಶ್ ಕಲೆಕ್ಷನ್ಸ್ ಸಂಸ್ಥೆಯವರು ನಗರದ ವಿವಿಧ ಭಾಗದಲ್ಲಿ 5 x 8 ಅಳತೆಯ 168 ಹೂಕುಂಡ ಕಿಯಾಸ್ಕ್‌ಗಳನ್ನು ಅಳವಡಿಸಿಕೊಂಡಿರುವುದಾಗಿ ಮಾನ್ಯ ಆಯುಕ್ತರಿಗೆ ದಿನಾಂಕ:03-06-2014, ಅಪೀಲು ಸ್ಥಾಯಿ ಸಮಿತಿಗೆ ದಿನಾಂಕ:26-12-2014, ಸಹಾಯಕ ಆಯುಕ್ತರು (ಜಾಹೀರಾತು) ರವರಿಗೆ ದಿನಾಂಕ:17-10-2014 ರಂದು ಹಾಗೂ ಆಡಳಿತಾಧಿಕಾರಿಗಳಿಗೆ ದಿನಾಂಕ:04-08-2015 ರಂದು ಮನವಿ ಸಲ್ಲಿಸಿರುತ್ತಾರೆ.

ಮೆ॥ ಅಲೇಶ್ ಕಲೆಕ್ಷನ್ಸ್ ಸಂಸ್ಥೆಯವರಿಗೆ ನ್ಯಾಯಾಲಯವು ನೀಡಿದ ತಡೆಯಾಜ್ಞೆಯನ್ನು ದಿನಾಂಕ:14-01-2016 ರಂದು ನ್ಯಾಯಾಲಯವು ತೆರವುಗೊಳಿಸಿರುತ್ತದೆ. ತೆರವುಗೊಂಡ ನಂತರ ಅವರು ಅಳವಡಿಸಿದ ಕಿಯಾಸ್ಕ್‌ಗಳನ್ನು ಜಾಹೀರಾತು ವಿಭಾಗದವರು ತೆರವುಗೊಳಿಸಿರುತ್ತಾರೆ.

ಆದ್ದರಿಂದ ಮೆ॥ ಅಲೇಶ್ ಕಲೆಕ್ಷನ್ಸ್ ಸಂಸ್ಥೆಯವರು 5 x 8 ಅಡಿ ಅಳತೆಯ ಕಿಯಾಸ್ಕ್ ಬದಲಾಗಿ 10 x 20 ಅಡಿ ಅಳತೆಯ 500 ಸಂಖ್ಯೆಯ ರೆಗ್ಯುಲರ್ ಮತ್ತು ವರ್ಟಿಕಲ್ ಲಿಟ್ಸ್ ಫ್ಲವರ್‌ಬಾಕ್ಸ್ ಜಾಹೀರಾತುಗಳನ್ನು ಅಳವಡಿಸಲು ಕೋರಿರುತ್ತಾರೆ. ಪ್ರಕರಣವನ್ನು ಆದೇಶಕ್ಕೆ ಕಾಯ್ದಿರಿಸಿದೆ.

***ಅಪೀಲು ಸ್ಥಾಯಿ ಸಮಿತಿಯ ದಿನಾಂಕ:16/02/2017 ರಂದು ನಡೆದ ಸಭೆಯ ನಡವಳಿಗಳಲ್ಲಿ ಕೆಳಕಂಡಂತೆ ನಿರ್ಣಯ (Order) ತೆಗೆದುಕೊಳ್ಳಲಾಗಿದೆ.***

***ನಿರ್ಣಯ (Order):-*** ಮೇಲ್ಮನವಿದಾರರ ಲಿಖಿತ ಹೇಳಿಕೆಗಳು ಮತ್ತು ಕೋರಿಕೆಗಳನ್ನು ಪರಿಶೀಲಿಸಲಾಯಿತು. ಹಾಗೂ ಮತ್ತು ಪ್ರತಿವಾದಿಗಳ ಹೇಳಿಕೆಗಳನ್ನು ಆಲಿಸಲಾಯಿತು. ಕೆ.ಎಂ.ಸಿ. ಕಾಯ್ದೆ 1976 ಸೆಕ್ಷನ್ 72ರ ಪ್ರಕಾರ "Obligation laid on remaining municipal authorities to carry out resolutions of the corporation.- The committees constituted under this Act and the Commissioner shall be bound to give effect to every resolution of the corporation unless such resolution is cncelled in whole or in part by the Governament:

Provided that, if in the opinion of the commissioner any resolution of the corporation or a committee constituted under this Act contravenes any provision of this Act or any other law or any rules, notification, regulation or bye-law made or issued under this Act or any other law, or of any order passed by the government or is prejudicial to the interests of the corporation he shall, within fifteen days of the passing of the resolution, refer the matter to the government for orders and inform the corporation of the committee, as the case may be, of the action taken by him at its next meeting and until the orders of the government on such reference are received, the commissioner shall not be bound to give effect to the resolution". ಎಂದು ಇರುತ್ತದೆ.

-ಅದರಂತೆ ಮಾನ್ಯ ಆಯುಕ್ತರು ಬೃ.ಬೆಂ.ಮ.ಪಾಲಿಕೆಯ ದಿನಾಂಕ:30-07-2012 ರಂದು ಕೌನ್ಸಿಲ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಕ್ಕೆ ಚಾಲನೆ ನೀಡಬೇಕಾಗಿತ್ತು. ಇದೇ ರೀತಿಯ ಮತ್ತೊಂದು ಪ್ರಕರಣದಲ್ಲಿ ಡಬ್ಲ್ಯೂ.ಪಿ. ನಂ-7116-7117/2013 ದಿನಾಂಕ:18-12-2014 ರ ನಿರ್ಣಯದಲ್ಲಿ ಕೆ.ಎಂ.ಸಿ. ಕಾಯ್ದೆ 1976 ಸೆಕ್ಷನ್ 72 ಹಾಗೂ

ರೂಲ್ 108 ಪ್ರಕಾರ ಕೌನ್ಸಿಲ್ ನಿರ್ಣಯವನ್ನು ಮಾನ್ಯ ಆಯುಕ್ತರು 15 ದಿನದಲ್ಲಿ ಚಾಲನೆ ನೀಡಬೇಕು ಇಲ್ಲವಾದಲ್ಲಿ ಕೌನ್ಸಿಲ್ ನಿರ್ಣಯವು ಅಂತಿಮವಾಗುತ್ತದೆಂದು ನಿರ್ಣಯಿಸಲಾಗಿದೆ.

ಕೌನ್ಸಿಲ್ ನಿರ್ಣಯದಂತೆ ಸರ್ಕಾರದಲ್ಲಿ ಬರೆದಿರುವ ಪತ್ರಕ್ಕೆ ಈ ವರೆಗೂ ಉತ್ತರ ಬಾರದೇ ಇರುವ ಹಿನ್ನೆಲೆಯಲ್ಲಿ ಪಾಲಿಕೆಯ ಆದಾಯದ ಹಿತದೃಷ್ಟಿಯಿಂದ 5 x 8 ಅಡಿ ಅಳತೆಯ 500 ಪ್ರಕಾಶಿತ ಪೋಲ್ ಕಿಯಾಸ್ಕ್‌ಗಳನ್ನು (ಎರಡೂ ಕಡೆ ಪ್ರದರ್ಶನವಾಗುವಂತೆ) ವಿದ್ಯುತ್ ಕಂಬಗಳ ಮೇಲೆ ಅಳವಡಿಸಲು ದಿನಾಂಕ:27-11-2013 ರಿಂದ 01 ವರ್ಷ ಅನುಮತಿ ನೀಡಲಾಗಿದ್ದು, ನಂತರ ಮೂರು ತಿಂಗಳ ಒಳಗೆ ಅಂದರೆ ದಿನಾಂಕ:24-02-2014 ರಂದು ಈ ಆದೇಶವನ್ನು ಹಿಂಪಡೆಯಲಾಗಿದೆ. ಹಾಗೂ ಹಲವಾರು ಬಾರಿ ಮನವಿ ಸಲ್ಲಿಸಿದರೂ ಇದಕ್ಕೆ ಯಾವುದೇ ಸ್ಥಳ ಪರಿಶೀಲನೆ ಮಾಡಿರುವುದಿಲ್ಲ ಹಾಗೂ ಇದಕ್ಕೆ ಉತ್ತರ ನೀಡದಿರುವುದು ಅಧಿಕಾರಿಗಳ ಕರ್ತವ್ಯ ನಿರ್ಲಕ್ಷ್ಯತೆ ಮೇಲ್ನೋಟಕ್ಕೆ ಕಂಡು ಬಂದಿರುವುದು.

ಆದ್ದರಿಂದ (1)ಟೆಂಡರ್ ಮುಖಾಂತರ 2 x 2.5 ಅಡಿ ಅಳತೆಯ 500 ಸಂಖ್ಯೆಯ ಹೂಕುಂಡಗಳನ್ನು 3 ವರ್ಷದ ನೆಲಬಾಡಿಗೆ ಮತ್ತು ಜಾಹೀರಾತು ತೆರಿಗೆಯನ್ನು ಪಡೆಯುವುದು.

(2) 5 x 8 ಅಡಿ ಅಳತೆಯ ಕಿಯಾಸ್ಕ್‌ಗಳ ಮಾನ್ಯ ಆಯುಕ್ತರು ನೀಡಿದ ಡಿಮ್ಯಾಂಡ್ ನೋಟೀಸ್ ನೀಡಿದ ದಿನಾಂಕದಿಂದ ನ್ಯಾಯಾಲಯದ ತಡೆಯಾಜ್ಞೆ ತೆರವುಗೊಂಡ ದಿನಾಂಕದ ವರೆಗೆ 168 ಕಿಯಾಸ್ಕ್‌ಗಳಿಗೆ ಮಾತ್ರ ನೆಲಬಾಡಿಗೆ ಮತ್ತು ಜಾಹೀರಾತು ತೆರಿಗೆಯನ್ನು ಪಡೆಯುವುದು.

(3) 10 x 20 ಅಡಿ ಅಳತೆಯ ಹೂಕುಂಡಗಳಿಗೆ ನೆಲಬಾಡಿಗೆ 10 ಪಟ್ಟು ಹೆಚ್ಚಾಗಿ (ದಿನಾಂಕ:27-11-2013ರಲ್ಲಿ ನೀಡಲಾಗಿರುವ ಡಿಮ್ಯಾಂಡ್ ನೋಟೀಸ್ ನಲ್ಲಿ ವಿಧಿಸಿರುವ ವಾರ್ಷಿಕ ನೆಲಬಾಡಿಗೆ ಹೂಕುಂಡ ಒಂದಕ್ಕೆ ರೂ.760/-ನ್ನು ರೂ.7,600/- ಕ್ಕೆ ನಿಗಧಿಪಡಿಸುವುದು) ಪಡೆಯುವುದು.

(4) 10 x 20 ಅಡಿ ಅಳತೆಯ 500 ಸಂಖ್ಯೆಯ ಹೂಕುಂಡಗಳಿಗೆ ಅನುಮತಿ ನೀಡಿದ ದಿನಾಂಕದಿಂದ ಜಾಹೀರಾತು ತೆರಿಗೆ ಪಡೆಯುವುದು.

ಮಾನ್ಯ ಆಯುಕ್ತರು ಬೃ.ಬೆಂ.ಮ.ಪಾಲಿಕೆ ರವರು ಜಾಹೀರಾತು ಬೈಲಾ 2006ರ ಪ್ರಕಾರ ತನ್ನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೌನ್ಸಿಲ್‌ನಲ್ಲಿ ತೆಗೆದುಕೊಂಡ ನಿರ್ಣಯಕ್ಕೆ ಅನುಗುಣವಾಗಿ ಮೆ।।ಅಲೇಶ್ ಕಲೆಕ್ಷನ್ಸ್ ರವರು ಕೋರಿರುವ 500 ಸಂಖ್ಯೆಯ 10 x 20 ಅಡಿ ಅಳತೆಯ ರೆಗ್ಯೂಲರ್ ಮತ್ತು ವರ್ಟಿಕಲ್ ಫ್ಲವರ್‌ಪಾಟ್ ಅನುಮತಿಯನ್ನು ಬೃ.ಬೆಂ.ಮ.ಪಾಲಿಕೆಯ ಜಾಹೀರಾತು ಬೈಲಾ 2006ರ ನಿಯಮದಡಿಯಲ್ಲಿ ಪರಿಗಣಿಸಲು ಸಮಿತಿಯು ತೀರ್ಮಾನಿಸಿತು.

**4) ವಿ.ಸಂ/ಅಸ್ಥಾಸ/13/(ನ.ಯೋ.)/16-17.**

ಅ.ಜಂ.ನಿ.ನ.ಯೋ.(ಉ) ಎಲ್.ಪಿ. ಸಂಖ್ಯೆ: JDTP/JC/DSH/ADTP/LP/46/2009-10, ರಂತೆ ದಿನಾಂಕ:28-02-2012 ರಂದು ಪಾಲಿಕೆಯ ವತಿಯಿಂದ ನೀಡಲಾಗಿರುವ ಪರಿಷ್ಕೃತ ನಕ್ಷೆಯ ವಿರುದ್ಧ ಷಕೀರಾ ಬೇಗಂ ಮತ್ತು ಇತರರು ಹಾಗೂ ಜಿ.ಎಂ. ಇನ್‌ಫೈನೈಟ್ ಡ್ವೆಲ್ಲಿಂಗ್ (ಇಂಡಿಯಾ) ಪ್ರೈ.ಲಿ. ರವರು ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

***ಪ್ರಸ್ತಾವನೆ:-*** ಪ್ರಕರಣವನ್ನು ಆದೇಶ ಘೋಷಣೆಯ ಕ್ರಮಕ್ಕಾಗಿ ಕಾಯ್ದಿರಿಸಿ (For pronouncement of Orders). ಮುಂದೂಡಲಾಯಿತು.

**5)ವಿ.ಸಂ/ಅಸ್ಥಾಸ/14/(ನ.ಯೋ.)/16–17.**

**BBMP/JDTP(S)/JC(E)LP/31/05-06,** ರಂತೆ ಸಹಾಯಕ ನಿರ್ದೇಶಕರು, ನಗರ ಯೋಜನೆ (ದಕ್ಷಿಣ) ರವರು ದಿನಾಂಕ:25-08-2015 ರಂದು ನೀಡಿರುವ ಹಿಂಬರಹದ ವಿರುದ್ಧ, ಮೆ॥ ವಿ.ಕೆ.ಸಿ. ಡೆವೆಲಪರ್ಸ್ ಪರವಾಗಿ ಶ್ರೀ. ಸಯ್ಯದ್ ಅಸ್ಲಂ ಬಾಷ ರವರು ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

***ಪ್ರಸ್ತಾವನೆ:-*** ಪ್ರಕರಣವನ್ನು ಆದೇಶ ಘೋಷಣೆಯ ಕ್ರಮಕ್ಕಾಗಿ ಕಾಯ್ದಿರಿಸಿ (For pronouncement of Orders). ಮುಂದೂಡಲಾಯಿತು.

**6)ವಿ.ಸಂ/ಅಸ್ಥಾಸ/15/(ಆರೋಗ್ಯ)/16–17.**

ದಿನಾಂಕ:26-12-2016 ರಂದು ಶ್ರೇಯಸ್ ಡಯಾಗ್ನಾಸ್ಟಿಕ್ಸ್ ಉದ್ಯಮಕ್ಕೆ ಆರೋಗ್ಯ ವೈದ್ಯಾಧಿಕಾರಿ (ಶಿವಾಜಿನಗರ ಉಪ ವಿಭಾಗ) ರವರು ಬೀಗಮುದ್ರೆ ಹಾಕಿರುವ ವಿರುದ್ಧ ತಾತ್ಕಾಲಿಕ ತಡೆಯಾಜ್ಞೆ ಕೋರಿ, ಶ್ರೀ.ನರೇಂದ್ರಕುಮಾರ್. ಸಿ. ರವರು ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

***ಪ್ರಸ್ತಾವನೆ:–*** ಆದೇಶ ಘೋಷಣೆಯ ಕ್ರಮಕ್ಕಾಗಿ ಕಾಯ್ದಿರಿಸಿದೆ (For pronouncement of Orders).

7) **ವಿ.ಸಂ/ಅಸ್ಥಾಸ/19/(ಕಂದಾಯ)/16–17.**

ಆಸ್ತಿ ವಿಳಾಸ: ಮಜರೆ ರಾಮಸ್ವಾಮಿ ಪಾಳ್ಯ, (ಮಾರಪ್ಪನ ಪಾಳ್ಯ), ಖಾಯಂ ಗುಡ್ಡ ಬ್ಯಾಡರಹಳ್ಳಿ, ವಾರ್ಡ್ ನಂ-92 (ಈಗಿನ ವಾರ್ಡ್ ಹೆಸರು ವಸಂತನಗರ) ಬೆಂಗಳೂರು. ಈ ಸ್ವತ್ತಿನ ಖಾತಾ ನೊಂದಾವಣೆಗೆ ಸಂಬಂಧಿಸಿದಂತೆ ಸಹ ಕಂದಾಯ ಅಧಿಕಾರಿ (ಜಯಮಹಲ್ ವಲಯ) ರವರು ದಿನಾಂಕ:20-09-1999 ರಂದು ಅಂತಿಮ ಹಿಂಬರಹ ನೀಡಿರುವ ವಿರುದ್ಧ ಶ್ರೀ. ಬಿ.ಎಸ್. ಶ್ರೀಪ್ರಕಾಶ್ ರವರು ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

***ಪ್ರಸ್ತಾವನೆ:-*** ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ತಮ್ಮ ವಾದವನ್ನು ಮಂಡಿಸುತ್ತಾ, ನಮ್ಮ ಸ್ವತ್ತಿಗೆ ಖಾತಾ ಪಡೆಯಲು1999 ರಿಂದ ಕೋರುತ್ತಿದ್ದು, ಇದುವರೆವಿಗೂ ಖಾತಾ ನೀಡಿರುವುದಿಲ್ಲ. ಹಾಗೂ ಸದರಿ ಸ್ವತ್ತಿಗೆ ಕಾಂಪೌಂಡ್ ಹಾಕಿದ ನಂತರ ನಮ್ಮ ಕೋರಿಕೆಯ ಪರಿಶೀಲಿಸುವುದಾಗಿ ಹಿಂಬರಹ ನೀಡಿರುತ್ತಾರೆ. ಅದರಂತೆ ಸ್ವತ್ತಿಗೆ ಮೂರು ಕಡೆ ಕಾಂಪೌಂಡ್ ಹಾಕಿದ್ದೇವೆ. ಆದರೂ ಈವರೆಗೂ ನಮ್ಮ ಸ್ವತ್ತಿಗೆ ಖಾತಾ ನೀಡಿರುವುದಿಲ್ಲ. ನಮ್ಮ ಸ್ವತ್ತಿನಲ್ಲಿ ಕಸ ಹಾಕುತ್ತಿದ್ದಾರೆ, ಸ್ವತ್ತಿನ ಪೂರ್ವ ಭಾಗದಲ್ಲಿ ರಸ್ತೆ ಇದೆ. ಎಂದು ಹೇಳಿಕೆ ನೀಡಿದರು. ಪ್ರತಿವಾದಿಗಳಾಗಿ ಕಂದಾಯ ಪರಿವೀಕ್ಷಕರು ಹಾಜರಾಗಿದ್ದು, ಸದರಿ ಸ್ವತ್ತಿಗೆ ಈ ವರೆಗೂ ಕಂದಾಯ ಪಾವತಿಸಿರುವುದಿಲ್ಲ. ಹಾಗೂ ಪಾಲಿಕೆಯ ವತಿಯಿಂದ ಯಾವುದೇ ಡಿಮ್ಯಾಂಡ್ ನೋಟೀಸ್ ಮತ್ತು ಖಾತಾ ನೀಡಿರುವುದಿಲ್ಲ. ಸ್ಥಳ ಪರಿಶೀಲಿಸಲಾಗಿದ್ದು, ಒಟ್ಟು ವಿಸ್ತೀರ್ಣ ಎರಡೂವರೆ ಎಕರೆ (21/2ಎಕರೆ) ಇರುತ್ತದೆ. ಎಂದು ಹೇಳಿಕೆ ನೀಡಿದರು. ಸಮಿತಿಯು ಸ್ಥಳ ಪರಿಶೀಲನೆ ಮಾಡಲು ಪ್ರಕರಣವನ್ನು ಮುಂದೂಡಲಾಯಿತು.

**8) ವಿ.ಸಂ/ಅಸ್ಥಾಸ/20/(ಆರೋಗ್ಯ)/16–17.**

ಸ್ವತ್ತಿನ ಸಂಖ್ಯೆ:692, 1ನೇ ಮತ್ತು 2ನೇ ಮಹಡಿ, 6ನೇ ಎ ಕ್ರಾಸ್, ಕೋರಮಂಗಲ 3ನೇ ಬ್ಲಾಕ್, ಬೆಂಗಳೂರು. ಈ ಸ್ವತ್ತಿನ ಉದ್ದಿಮೆ ಪರವಾನಗಿ ಗೆ ಸಂಬಂಧಿಸಿದಂತೆ ದಿನಾಂಕ:11-07-2016 ರಂದು ಆರೋಗ್ಯ ವೈದ್ಯಾಧಿಕಾರಿಗಳು (ಬಿ.ಟಿ.ಎಂ. ವಲಯ) ರವರು ನೀಡಿರುವ ನೋಟೀಸ್ ವಿರುದ್ಧ ಮೆ॥ ವರ್ಸ್ ಇಂಟರ್‌ನ್ಯಾಷನಲ್

ಪ್ರೈ.ಲಿ. ಸಂಸ್ಥೆಯ ಪರವಾಗಿ ಶ್ರೀ.ವಿ. ಮನೋಹರ್ ರವರು ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

***ಪ್ರಸ್ತಾವನೆ:-*** ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಪ್ರತಿವಾದಿಗಳಾದ ಆರೋಗ್ಯ ವೈದ್ಯಾಧಿಕಾರಿ (ಬಿ.ಟಿ.ಎಂ. ವಲಯ) ರವರು ತಮ್ಮ ವಾದವನ್ನು ಮಂಡಿಸುತ್ತಾ, ಅನಧಿಕೃತವಾಗಿ ಉದ್ದಿಮೆಯನ್ನು ನಡೆಸಲಾಗುತ್ತಿದೆ. ಸದರಿ ಉದ್ದಿಮೆಯ ವಿರುದ್ಧ ರೆಸಿಡೆನ್ಸಿ ವೆಲ್ಫೇರ್ ಅಸೋಸಿಯೇಷನ್ ರವರು ದೂರು ನೀಡಿದ್ದಾರೆ. ಒಂದೇ ಕಟ್ಟಡದ ನಾಲ್ಕು ಮಹಡಿಯಲ್ಲಿ ಉದ್ದಿಮೆ ನಡೆಸಲಾಗುತ್ತಿದೆ. ಕಾನೂನು ಕೋಶದ ಅಭಿಪ್ರಾಯ ತೆಗೆದುಕೊಂಡು ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿಕೆ ನೀಡಿದರು. ಮೇಲ್ಮನವಿದಾರ ಪರವಾಗಿ ಶ್ರೀ ವಿ.ಮನೋಹರ್ ರವರು ತಮ್ಮ ವಾದವನ್ನು ಮಂಡಿಸುತ್ತಾ, ಸದರಿ ಸ್ವತ್ತಿನಲ್ಲಿ ಈಗ ಖಾಸಗಿ ಕಂಪೆನಿ ನಡೆಸುತ್ತಿದ್ದು, ಪೇಯಿಂಗ್ ಗೆಸ್ಟ್ ಅಡಿಯಲ್ಲಿ ಪರವಾನಗಿ ನೀಡಲು ಕೋರಿದರು. ಸದರಿ ಸ್ವತ್ತಿಗೆ 40 ಅಡಿ ರಸ್ತೆ ಇರುವ ಬಗ್ಗೆ ಪುನರ್ ಪರಿಶೀಲಿಸುವಂತೆ ಹಾಗೂ ಕಟ್ಟಡದ ನಕ್ಷೆ ಮಂಜೂರಾತಿಯನ್ನು ವಾಣಿಜ್ಯ ಉದ್ದೇಶಕ್ಕಾಗಿ ಪಡೆಯಲಾಗಿದೆಯೇ ಎಂಬ ಬಗ್ಗೆ ಪರಿಶೀಲಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು. ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

9) **ವಿ.ಸಂ/ಅಸ್ಥಾಸ/21/(ಕಂದಾಯ)/16–17.**

ಆಸ್ತಿ ತೆರಿಗೆ ಸರಿಹೊಂದಿಸಿಕೊಳ್ಳುವ ಬಗ್ಗೆ, ಜಂಟಿ ಆಯುಕ್ತರು (ಪೂರ್ವ) ರವರ ಆದೇಶ ಸಂಖ್ಯೆ: ಜಂ.ಆ(ಪೂ)ರೆವಿನ್ಯೂ ಅಪೀಲು/20/15-16 ರಂತೆ ದಿನಾಂಕ:29.03.2016 ರಂದು ನೀಡಿರುವ ಆದೇಶದ ಪ್ರಕಾರ ಕ್ರಮ ವಹಿಸದೇ ಇರುವ ವಿರುದ್ಧ ಡಾಕ್ಟರ್ ನವೀನ್ ಥಾಮಸ್ ರವರು ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

***ಪ್ರಸ್ತಾವನೆ:-*** ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ತಮ್ಮ ವಾದವನ್ನು ಮಂಡಿಸುತ್ತಾ, ಬೆಂಗಳೂರು ಬ್ಯಾಪ್ಟಿಸ್ಟ್ ಆಸ್ಪತ್ರೆ, ನಂ.1/ಬಿ, ಹೆಬ್ಬಾಳ ವಿಲೇಜ್, ಬಳ್ಳಾರಿ ರಸ್ತೆ, ಬೆಂಗಳೂರು. ಈ ಸ್ವತ್ತಿಗೆ 2015-16ನೇ ಸಾಲಿನಲ್ಲಿ ತೆರಿಗೆ ಪಾವತಿ ಮಾಡುವಾಗ ರೂ.17,65,455/-ಗಳನ್ನು ಅಧಿಕವಾಗಿ ಪಾವತಿಸಿರುತ್ತೇವೆ. ಸದರಿ ಹೆಚ್ಚಾಗಿ ಪಾವತಿಸಿರುವ ತೆರಿಗೆಯನ್ನು ಮುಂದಿನ ತೆರಿಗೆ ಅವಧಿಗೆ ಹೊಂದಾಣಿಕೆ ಮಾಡಿಕೊಳ್ಳಲು ಕೋರಲಾಗಿದ್ದು, ನಮ್ಮ ಕೋರಿಕೆಯನ್ನು ಪರಿಗಣಿಸಿಲ್ಲ. ಹಾಗೂ ಜಂಟಿ ಆಯುಕ್ತರು (ಪೂರ್ವ) ರವರ ಮುಂದೆ ಮೇಲ್ಮನವಿ ಸಲ್ಲಿಸಲಾಗಿದ್ದು, ದಿನಾಂಕ:29.03.2016 ರಂದು ವಿಚಾರಣೆ ನಡೆಸಿ, ಅಧಿಕವಾಗಿ ಪಾವತಿಸಲಾಗಿರುವ ತೆರಿಗೆಯನ್ನು ಮುಂದಿನ ಅವಧಿಗೆ ಹೊಂದಾಣಿಕೆ ಮಾಡಿಕೊಳ್ಳುವಂತೆ ಸಹ ಕಂದಾಯ ಅಧಿಕಾರಿ (ಹೆಬ್ಬಾಳ) ರವರಿಗೆ ಸೂಚಿಸಿ, ಆದೇಶ ನೀಡಿರುತ್ತಾರೆ. ಆದರೂ, ಈ ವರೆಗೂ ತೆರಿಗೆ ಹೊಮದಾಣಿಕೆ ಮಾಡಿಕೊಳ್ಳುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಹಾಗೂ ಪುನ: ತೆರಿಗೆ ಪಾವತಿಸುವಂತೆ ಪಾಲಿಕೆಯ ಅಧಿಕಾರಿಗಳು ನಮಗೆ ಡಿಮ್ಯಾಂಡ್ ನೋಟೀಸ್ ನೀಡಿದ್ದಾರೆ. ಎಂದು ಹೇಳಿಕೆ ನೀಡಿದರು. ಪ್ರತಿವಾದಿಗಳಾದ ಸಹ ಕಂದಾಯ ಅಧಿಕಾರಿ (ಹೆಬ್ಬಾಳ ಉಪವಲಯ) ರವರು ತಮ್ಮ ವಾದವನ್ನು ಮಂಡಿಸುತ್ತಾ, ಸದರಿ ಆಸ್ತಿಯನ್ನು ಒಟ್ಟುಗೂಡಿಸಲಾಗಿದ್ದು, ಪಾಲಿಕೆಯಿಂದ ನೀಡಲಾದ ನೋಟೀಸ್ ಅನುಸಾರ ಆಸ್ತಿತೆರಿಗೆ ಪಾವತಿಸಿರುತ್ತಾರೆ. 2015-16ನೇ ಸಾಲಿನ ತೆರಿಗೆ ಪಾವತಿಸುವಾಗ ಹೆಚ್ಚುವರಿಯಾಗಿ ಪಾವತಿಸಲಾಗಿರುವ ತೆರಿಗೆಯನ್ನು ಹಿಂದಿರುಗಿಸುವ ಬಗ್ಗೆ ಎ.ಜಿ. ಆಡಿಟ್ ಸಮಯದಲ್ಲಿ ಲೆಕ್ಕ ಹೊಂದಾಣಿಕೆ ಆಗದೇ ಇರುವುದರಿಂದ ಹಾಗೂ 2016-17ನೇ ಸಾಲಿನಿಂದ ಪಾಲಿಕೆಯಲ್ಲಿ ಆಸ್ತಿ ತೆರಿಗೆ ಪಾವತಿಸಿಕೊಳ್ಳುವ-

-ಆನ್‌ಲೈನ್ ತಾಂತ್ರಿಕತೆಯನ್ನು ಬದಲಾಯಿಸಲಾಗಿದ್ದು, ಅದರಲ್ಲಿ ಅಧಿಕವಾಗಿ ಪಾವತಿಸಲಾಗಿರುವ ತೆರಿಗೆಯನ್ನು ಹೊಂದಾಣಿಕೆ ಮಾಡಲು ಅವಕಾಶ ಕಲ್ಪಿಸಿಲ್ಲವಾದ್ದರಿಂದ ಸದರಿಯವರು ಅಧಿಕವಾಗಿ ಪಾವತಿಸಿರುವ ತೆರಿಗೆಮೊತ್ತವನ್ನು ಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದರು. ಪ್ರಕರಣವನ್ನು ಆದೇಶಕ್ಕೆ ಕಾಯ್ದಿರಿಸಿದೆ.

**10) ವಿಷಯ ಸಂಖ್ಯೆ:ಅಸ್ಥಾಸ/03/(ಆರೋಗ್ಯ)/2016–17.**

ಶ್ರೀ ಹೆಚ್.ವೆಂಕಟೇಶ್ ರೆಡ್ಡಿ, ನಂ.112, ಹೊಸದು,02, ಆಂಜನೇಯ ದೇವಸ್ಥಾನದ ರಸ್ತೆ, ಯಡಿಯೂರು, ಬೆಂಗಳೂರು. ರವರು ತಮ್ಮ ಗ್ಲಾಸ್ ಕಟ್ಟಿಂಗ್ ಉದ್ದಿಮೆಗೆ ಸಂಬಂಧಿಸಿದಂತೆ ದಿನಾಂಕ:09-06-2016 ರಂದು ಆರೋಗ್ಯಾಧಿಕಾರಿ (ದಕ್ಷಿಣ) ರವರು ಹೊರಡಿಸಿರುವ ಕಛೇರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ದಿನಾಂಕ:01.07.2016 ರಂದು ಆಯುಕ್ತರು ಹಾಗೂ ದಿನಾಂಕ:19.07.2016 ರಂದು ವಿಶೇಷ ಆಯುಕ್ತರು ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿಯ ತೀರ್ಮಾನದ ಬಗ್ಗೆ.

***ಪ್ರಸ್ತಾವನೆ:–*** ಪ್ರಕರಣವನ್ನು ಆದೇಶ ಘೋಷಣೆಯ ಕ್ರಮಕ್ಕಾಗಿ ಕಾಯ್ದಿರಿಸಿ (For pronouncement of Orders). ಮುಂದೂಡಲಾಯಿತು.

ಸಹಿ/-
ಅಧ್ಯಕ್ಷರು
ಅಪೀಲುಗಳ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ